## ಕವಿತೆ



**ಜಿ.ಪಿ.ಬಸವರಾಜು**
ಕಲೆ: ರೂಪಶ್ರೀ ಕಲ್ಲಿಗನೂರು

# ಈ ಬೆಟ್ಟ
# ಈ ಹೊಳೆ
# ಈ ಜೀವ



ಇದು ಉತ್ತರಕ್ಕೊ ದಕ್ಷಿಣಕ್ಕೊ
ತಿಳಿಯುವುದಿಲ್ಲ
ಪೂರ್ವಕ್ಕೂ ಇದ್ದೀತು ಅಥವಾ
ಪಶ್ಚಿಮಕ್ಕೂ

ಈ ಊರಿಗೆ ಈ ಬೆಟ್ಟ
ನಮ್ಮ ಊರಿಗೆ ನಮ್ಮ ಬೆಟ್ಟ
ಹೊರಗಿನಿಂದ ಬಂದವರಿಗೆ
ಆಹಾ! ಎಂಥ ನೋಟ
ರೆಪ್ಪೆ ಪಿಳುಕಿಸದೆ ನೋಡುತ್ತಾರೆ
ಆಡಿದ ಮಾತನ್ನೇ ಆಡುತ್ತಾರೆ
ಬೆಟ್ಟವನ್ನು ಇಡಿಯಾಗಿ ನುಂಗಿ

ಊರತುಂಬ ತಿರುಗಾಡುವ ನಾವು
ಬೀದಿ ಗಲ್ಲಿ ಟಾಕೀಸು ಹೋಟೆಲು
ಎಲ್ಲೆಲ್ಲೂ ತಿರುಗುತ್ತ ಕಂಡವರ ಕೈ
ಕುಲುಕುತ್ತ ನಗುತ್ತ ದಿನಕಳೆಯುತ್ತ

ನೆನಪಾಗುವುದೇ ಇಲ್ಲ ಬೆಟ್ಟ, ಅದಾಗಿ
ಬಂದು ಢಿಕ್ಕಿ ಕೊಡುವುದೂ ಇಲ್ಲ
ಅಪರೂಪಕ್ಕೆ ಕಣ್ಣಿಗೆ ಬಿದ್ದಾಗ ನೋಡಿ
ಮರೆತದ್ದು ನೆನಪಾದಂತೆ ಮೇಲೆಕೆಳಗೆ
ಕಣ್ಣಾಡಿಸಿ ಮತ್ತೆ ಮುಂದುವರಿಯುತ್ತ
ಮರೆತೇ ಬಿಡುತ್ತೇವೆ ಈ ಬೆಟ್ಟಕ್ಕೆ ಬೆಟ್ಟವನ್ನೇ

ಹೀಗೆಯೇ ನದಿ, ಹೊಳೆ, ಹತ್ತಿರದ ಮರಗಿಡ
ಅಷ್ಟೇಕೆ ಮನೆಯ ಬೆಕ್ಕು ನಾಯಿಗಳನ್ನೂ
ಮರೆಯುತ್ತ, ನೆನೆಯುತ್ತ ಕೊಚ್ಚಿಹೋಗುತ್ತೇವೆ
ಕಾಲದ ಪ್ರವಾಹದಲ್ಲಿ; ಅವೇ ಬಂದು ಕಾಲ
ಸುತ್ತಬೇಕು, ಮೂಸಿ ಕರೆಯಬೇಕು ತಮ್ಮೆಡೆಗೆ

ಗಾಳಿಹಾಕಿ ತೋರಬೇಕು ಕೊಂಬೆರೆಂಬೆ ಆಗಾಗ
ಬೋಳಾಗಿ ಚಿಗುರಾಗಿ ಹೂವಾಗಿ ಕಾಯಾಗಿ ಇನ್ನೂ
ಏನೇನೊ ಆಗುತ್ತ, ತಲೆಕೊಡಬೇಕು ಕಾಲವೆಂಬೊ
ಕಾಲಕ್ಕೆ; ಕಾಣದ ಯಾವುದೊ ಕೊಂಡಿ ಬೆಸೆದು ಎಲ್ಲ
ಜೀವಗಳ ಬಂಧಿಸಿದೆಯಲ್ಲ, ಅದನ್ನೆ ಹುಡುಕುತ್ತ
ಮರೆಯುತ್ತ ತಿರುಗುತ್ತ ಗಸ್ತು ಹಗಲೂ ರಾತ್ರಿಯೂ